### ಆಲೋಚನೆಗೆ ಹಚ್ಚಿದ ಲೇಖನ

‘ವೇದಾರಣ್ಯಂ ಉಪ್ಪೋ ಉಪ್ಪು!’ (ಮಾ.9. ಆನಂದತೀರ್ಥ ಪ್ಯಾಟಿ) ಜೀವನ ಚೈತ್ರ ಅಂಕಣ ಬಹಳ ಕುತೂಹಲದಿಂದ ಓದಿಸಿಕೊಂಡು ಹೋಯಿತು. ಉಪ್ಪು ತಯಾರಿಕೆ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಾಯಿತು. ಅಡುಗೆಯಲ್ಲಿ ಸ್ವಲ್ಪ ಉಪ್ಪು ಜಾಸ್ತಿನೋ ಕಮ್ಮಿನೋ ಆದಾಗ ಬೇಸರಗೊಳ್ಳುವ ನಾವು ಉಪ್ಪಿನ ಸಲುವಾಗಿ ದುಡಿಯುವ ಆ ಕಷ್ಟ ಜೀವಿ ಕಾರ್ಮಿಕರ ಬಗ್ಗೆಯೂ ಸ್ವಲ್ಪ ಯೋಚಿಸಬೇಕು ಅನಿಸಿತು.

—ವಿ. ಹೇಮಂತ ಕುಮಾರ್, ಬೆಂಗಳೂರು

### ಭಗವಾನ್ ಅವರಿಗೆ ಅಕ್ಷರ ನಮನ

‘ಆಡಿಸಿದ ಗೊಂಬೆ ಆಟ ಮುಗಿಸಿತು’ (ಮಾ.9, ರಘುನಾಥ ಚ.ಹ.) ಲೇಖನ, ಎಸ್.ಕೆ. ಭಗವಾನ್ ಅವರು ಕನ್ನಡ ಚಿತ್ರರಂಗಕ್ಕೆ ನೀಡಿದ ಅಪಾರ ಕೊಡುಗೆಯನ್ನು ಸ್ಮರಿಸಿದಂತಿದೆ. ಭಗವಾನ್ ಅವರ ಸಿನಿಮಾ ಪಯಣವನ್ನೂ ಅಕ್ಷರಗಳ ಮೂಲಕ ತೆರೆದಿಟ್ಟಿದೆ.

—ಚರಣ್ ಎಸ್., ಹಾಸನ

### ಮಾಹಿತಿಪೂರ್ಣ ಲೇಖನ

‘ಕನ್ನಡಿಗರಿಗೂ ಆರಾಧ್ಯ ದೈವ ಮರಾಠಿಗರ ತುಳಜಾ ಭವಾನಿ’ (ಮಾ.9, ಶ್ರೀನಿವಾಸ ಜೋಕಟ್ಟೆ) ಲೇಖನ ಹಲವು ವಿಷಯಗಳನ್ನು ಒಳಗೊಂಡಿದೆ. ದೇವಸ್ಥಾನದ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿದೆ. ಮಹಾರಾಷ್ಟ್ರದಲ್ಲಿನ ತುಳಜಾ ಭವಾನಿ ದೇವಿಯನ್ನು ಕನ್ನಡಿಗರೂ ಆರಾಧಿಸುತ್ತಾರೆ ಎಂಬುದು ನಮಗೆ ಹೊಸ ವಿಷಯ. ನಮಗೂ ಅಲ್ಲಿಗೆ ಹೋಗುವ ಮನಸ್ಸಾಯಿತು.

—ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು

### ಕನ್ನಡಿಗರ ದೇವಿಯೂ ಹೌದು

ತುಳಜಾ ಭವಾನಿ ದೇವಸ್ಥಾನದ ಕುರಿತು ಲೇಖನ ಓದಿ ಸಂತೋಷವಾಯಿತು. ಮುಂಬೈನಲ್ಲಿ ವಾಸವಾಗಿರುವ ನಾವು ಕೂಡ ಅಲ್ಲಿಗೆ ಭೇಟಿ ನೀಡಿದೆವು. ಮಹಾರಾಷ್ಟ್ರದಲ್ಲಿನ ಈ ದೇವಿ ನೋಡಲು ಕನ್ನಡಿಗರು ಬರುತ್ತಾರೆ ಎಂಬುದೇ ಖುಷಿ ವಿಷಯ.

—ಎಚ್ಚಾ ರೆಲ್, ಮುಂಬೈ

### ವಸ್ತುನಿಷ್ಠ ಅವಲೋಕನ

‘ಶಿಶುನಾಳ ಶರೀಫರ ತತ್ವಯಾನ’ (ಮಾ.9, ಜಿ.ವಿ. ಆನಂದಮೂರ್ತಿ) ಲೇಖನ ತುಂಬಾ ಇಷ್ಟವಾಯ್ತು. ತಮ್ಮ ತತ್ವ, ಜಿಜ್ಞಾಸೆ ಹಾಗೂ ಅನುಪಮ ಶೈಲಿಯಿಂದಾಗಿ ಶರೀಫರು ಕನ್ನಡಿಗರೆಲ್ಲರ ಅಚ್ಚುಮೆಚ್ಚಿನ ಕವಿ, ದಾರ್ಶನಿಕ. ಅವರನ್ನು ಕುರಿತ ಅವಲೋಕನ ವಸ್ತುನಿಷ್ಠ ಲೇಖನ ಅಷ್ಟೇ ವಾಸ್ತವಿಕವಾಗಿ ಮೂಡಿಬಂದಿದೆ. ಲೇಖನದ ಭಾಷೆ ಓದಿಸಿಕೊಂಡು ಹೋಗುವಂಥದು. ನಿರೂಪಣೆಯಲ್ಲಿ ನಾವೀನ್ಯ, ಶಬ್ದ ಸಂಪತ್ತು, ಅಧ್ಯಾತ್ಮ ಅನುಭಾವಗಳು ಕಾಣಿಸಿದವು.

—ಚಂದ್ರಪ್ರಭಾ ಬಾಗಲಕೋಟೆ

### ಇನ್ನಷ್ಟು ಕಲಾವಿದರ ಪರಿಚಯವಾಗಲಿ

‘ರಂಗನಾಯಕಿಯ ಕಥೆ’ (ಮಾ.2, ಮಂಜುಶ್ರೀ ಎಂ. ಕಡಕೋಳ) ಲೇಖನ ಕನ್ನಡ ರಂಗಭೂಮಿಯಲ್ಲಿ ಚಿರಪರಿಚಿತ ಕಲಾವಿದೆ ಲಲಿತಮ್ಮನವರ ಸಂಪೂರ್ಣ ಪರಿಚಯ ಮಾಡಿಸಿತು. ಅವರ ರಂಗಭೂಮಿಯ ಅಭಿರುಚಿ, ಅಭಿನಯ, ಬದ್ಧತೆಯ ಬದುಕು ಮೆಚ್ಚುವಂತಿದೆ. ಇಂಥ ಕಲಾವಿದರ ಪರಿಚಯ ಹೆಚ್ಚು ಹೆಚ್ಚು ಬರಲೆಂದು ಆಶಿಸುವೆ.

—ಜಿ. ಎಸ್. ಆರ್ಯಮಿತ್ರ, ಸಾಗರ

### ಎಲ್ಲ ಕಾಲಕ್ಕೂ ಸಲ್ಲುವ ಕಥೆ

‘ಮುಖವಾಡ’ (ಮಾ.9, ಶ್ವೇತಾ ಹೊಸಬಾಳೆ) ಕಥೆ ಓದುತ್ತಿದ್ದಂತೆ, ಶಾಲಾ, ಕಾಲೇಜು ದಿನಗಳಲ್ಲಿ, ಬಸ್ಸಲ್ಲಿ ಪಯಣಿಸುವಾಗ ಅನುಭವಿಸಿದ ಕಿರುಕುಳಗಳು ನೆನಪಾದವು. ಹೇಳಿಕೊಳ್ಳಲೂ ಆಗದೇ, ಪ್ರತಿಭಟಿಸಲೂ ಆಗದೇ ಮನಸ್ಸಿಗೆ ಹಿಂಸೆ ಅನಿಸಿದ್ದು ಅದೆಷ್ಟೋ ಬಾರಿ. ಹೇಳಿಕೊಂಡರೂ ನಮ್ಮದೇ ತಪ್ಪಿದೆ ಅಂತ ಅಂದುಕೊಳ್ಳುವರೇನೋ ಎಂಬ ಭಯ. ಪ್ರತಿಭಟಿಸಲೂ ಹಿಂಜರಿಕೆ.

ಘಟನೆಯೊಂದು ನೆನಪಾಗುತ್ತಿದೆ. ಕಾಲೇಜು ಸಮಯದಲ್ಲಿ ಬಸ್ಸಿನಲ್ಲೊಬ್ಬ ಬರುತ್ತಿದ್ದ. ಹುಡುಗಿಯರ ಪಕ್ಕ ನಿಂತು ಸಂದರ್ಭ ಸಾಧಿಸಿ ಅವರ ಮೈ ಮುಟ್ಟುತ್ತಿದ್ದ. ಪ್ರತಿದಿನ ಒಬ್ಬರಲ್ಲೊಬ್ಬರು ತಮಗಾದ ಈ ಕಿರುಕುಳವನ್ನು ಹೇಳಿಕೊಳ್ಳುತ್ತಿದ್ದರು. ಆದರೂ ನಾವೇಕೆ ಮೌನವಾಗಿ ಸಹಿಸಿಕೊಳ್ಳುತ್ತಿದ್ದೆವೋ ನೆನೆದಾಗ



ಆಶ್ಚರ್ಯವೂ, ಸಿಟ್ಟೂ ಬರುತ್ತದೆ. ನಮ್ಮ ಈ ಮೌನವೇ ಆತ ತನ್ನ ಚಟ ಹೆಚ್ಚಿಕೊಳ್ಳಲು ಸಹಕಾರಿಯಾಗಿತ್ತು ಎಂಬುದು ಸುಳ್ಳಲ್ಲ. ಇಂತಹ ಕಾಮುಕ್ರಿಮಿಗಳು ಎಲ್ಲಾ ಕಾಲದಲ್ಲೂ ಇರುತ್ತಾರೆ. ‘ಕಚ್ಚಲು ಬಾರದಿದ್ದರೂ ಪರವಾಗಿಲ್ಲ, ಬುಸುಗುಟ್ಟಲಾದರೂ ಕಲಿತುಕೋ’ ಅಂತ ನಮ್ಮ ಹೆಣ್ಣುಮಕ್ಕಳಿಗೆ ಹೇಳಿಕೊಡಲೇಬೇಕಾಗಿದೆ.

—ರಾಜೇಶ್ವರಿ ಪುತ್ತೂರು




### ಹೆಣ್ಣಿನ ಕುರಿತ ಹೊಸನೋಟ

‘ಸೆಕೆಂಡ್ ಇನಿಂಗ್ಸ್, ಜೀವನಚೈತ್ರದಲ್ಲಿ ಹೊಸ ಕಾಮನಬಿಲ್ಲು’ (ಮಾ.9, ಸುಮಾ ಬಿ.) ಲೇಖನ ಉಲ್ಲಾಸ ತುಂಬಿತು. ಮಹಿಳೆಯನ್ನು ಅಡುಗೆ, ಮನೆಕೆಲಸ, ಮನೆಯವರೆಲ್ಲರ ಅಗತ್ಯ ಪೂರೈಕೆಯ ವಸ್ತುವನ್ನಾಗೇ ಸಮಾಜ ನೋಡುತ್ತಿದೆ. ಪುರುಷ ಪ್ರಧಾನ ಸಮಾಜದಲ್ಲಿ ಯಾರದೇ ತಪ್ಪಿರಲಿ, ಕಳಂಕ ಹೊರುವವಳು ಹೆಣ್ಣೇ ಆಗಿರುತ್ತಾಳೆ. ಚಿಕ್ಕಂದಿನಿಂದಲೇ ಜವಾಬ್ದಾರಿಯ ಹೊರೆಯನ್ನು ಆಕೆ ಮೇಲೆ ಹೇರುತ್ತಾರೆ. ಅವಳ ವೈಯಕ್ತಿಕ ಹವ್ಯಾಸ, ಓದು ಮುಂದುವರೆಸಲು ಮನೆಯವರಿಂದಲೇ ಬೆಂಬಲ ಸಿಗುವುದಿಲ್ಲ. ಸಮಾಜದ ಕೊಂಕುನುಡಿಯೂ ಆಗಾಗ್ಗೆ ಜೊತೆಯಾಗಿರುತ್ತದೆ. ಹೆಣ್ಣಿಗೂ ಒಂದು ಜೀವನವಿದೆ ಎಂಬುದನ್ನು ಲೇಖನ ಮತ್ತೆ ಸಮಾಜಕ್ಕೆ ನೆನಪಿಸುವಂತಿದೆ. ಹೆಣ್ಣಿನ ಕುರಿತ ಹೊಸನೋಟ ನೀಡಿದೆ.

—ಅರ್ಪಣ್ ಎಸ್.ಎಂ., ಮೈಸೂರು

### ಹೆಣ್ಣಿನ ಕನಸುಗಳ ಬಣ್ಣ

ಮದುವೆ–ಸಂಸಾರ–ಮಕ್ಕಳು ಎಲ್ಲವನ್ನೂ ನಿಭಾಯಿಸುತ್ತಲೇ ಹೆಣ್ಣುಮಕ್ಕಳು ತಮ್ಮ ಅಸ್ಮಿತೆ ರೂಪಿಸಿಕೊಳ್ಳಲು ಹೊರಟಿರುವ ಪ್ರಯತ್ನಗಳು ಅಲ್ಲಲ್ಲಿ ಕಾಣುತ್ತಿರುವುದು ಸಂತಸ. ಸ್ವಂತ ಬದುಕು, ಸ್ವ ಆಸಕ್ತಿಗಳಿಗೂ ತುಡಿಯುತ್ತಿರುವ ಮನೋಭಾವ ಸ್ವಾಗತಾರ್ಹ.

ಅದಕ್ಕೆ ಉದಾಹರಣೆಯೆಂಬಂತೆ ಕೆಲವು ಹೆಣ್ಣು ಮಕ್ಕಳ ಜೀವನಕಥನಗಳನ್ನು ‘ಸೆಕೆಂಡ್ ಇನಿಂಗ್ಸ್’ ಲೇಖನ ಪರಿಚಯಿಸಿದೆ. ವಯಸ್ಸಿನ ಹಂಗಿಲ್ಲದೇ ತಮ್ಮ ಕನಸುಗಳಿಗೆ ಬಣ್ಣ ಹಚ್ಚಿಕೊಳ್ಳಲು ಹೊರಟಿರುವ ಹೆಣ್ಣುಮಕ್ಕಳಿಗೆ ತಕ್ಕ ವಾತಾವರಣವೂ ಸಮಾಜದಲ್ಲಿ ದೊರಕಲಿ ಎಂದು ಹಾರೈಸುವೆ.

—ದಿನೇಶ್ ಕುಮಾರ್ ಎಸ್., ತುಮಕೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in